
ಯಾರೂ ಇಲ್ಲ. ಅವಳು ಬ್ಯಾಂಕಿಗೆ ಹೋಗುವ ಬರುವ ಸಮಯ ನೋಡಿಕೊಂಡು ತಮ್ಮ ಗಡಿಯಾರಗಳನ್ನು ಸರಿ ಮಾಡಿಕೊಳ್ಳುತ್ತಿದ್ದರು. ಮನೆ ಹೇಗೆ ನಿಭಾಯಿಸಬೇಕೋ ಗೊತ್ತಿರದವರು ಆಕೆಯನ್ನು ಅನುಕರಿಸುತ್ತಿದ್ದರು. ಎಲ್ಲರೂ ಅವಳನ್ನು ನೋಡಿ ಕಲಿಯುವವರೇ..ಹಾಗೆ ಎಷ್ಟು ಜನವೋ! ಸುಶೀಲ ಜನರ ನಡುವೆ ಒಂದಿಷ್ಟು ಜಾಗ ಮಾಡಿಕೊಂಡು ಬಂದು ಅನೂರಾಧಾಳ ದೇಹದ ಮೇಲೆ ಲೆನ್ಸ್ ಇಟ್ಟು ನೋಡಿದಳು. ಅವಳ ದೇಹ ಬದಲಾಗಿದ್ದು ಸುಣ್ಣದ ಹಾಗಲ್ಲ. ಒಂದರ ಪಕ್ಕ ಒಂದರಂತೆ ಮಾತ್ರೆಗಳನ್ನು



ಜೋಡಿಸಿದ ಹಾಗಿತ್ತು. ಕೆಲವು ದೊಡ್ಡವು. ಕೆಲವು ಚಿಕ್ಕವು. ಕೆಲವು ಗುಂಡಕ್ಕಿರುವವು. ಕೆಲವು ಚೌಕಾಕಾರದವು. ಕೆಲವು ತಿಳಿ ಗುಲಾಬಿ ಬಣ್ಣದವು. ಹೀಗೆ ಥರೇವಾರಿ ಮಾತ್ರೆಗಳಿಂದ ಜೋಡಿಸಿದ ಹಾಗಿತ್ತು ಅವಳ ದೇಹ.

ಒಬ್ಬಾಕೆ ಗಾಬರಿಯಾಗಿ, 'ಇರುವೆ ಬರತಾ ಇವೆ!' ಅಂದಳು.

'ಹೌದು. ಅದರಲ್ಲಿ ಷುಗರ್ ಕೋಟೆಡ್ ಮಾತ್ರೆಗಳು ಇದ್ದಿರಬಹುದಲ್ಲ' ಅಂದಳು ಸುಶೀಲ.

'ಹೌದು. ಷುಗರ್ ಕೋಟೆಡ್ ಮಾತ್ರೆಗಳನ್ನು ನಾನೂ ಕೆಲವು ಕೊಟ್ಟಿದ್ದೆ ಅವಳಿಗೆ' ಸೂರ್ಯಾರಾವು ನೆನಪಿಸಿಕೊಂಡ.

ಕೆಲವರು ಸುಶೀಲೆಯ ಕೈಯ್ಯಿಂದ ಲೆನ್ಸ್ ಕಸಿದು ನೋಡುತ್ತಿದ್ದರು. ಕೆಲವರು ಸೂರ್ಯಾರಾವು ಇಲ್ಲದಾಗ ಅನೂರಾಧಾಳ ದೇಹವನ್ನು ಚಿವುಟಿ ನೋಡುತ್ತಿದ್ದರು.

ಹೆಣವನ್ನು ಮಂಚದ ಮೇಲೆ ಮಲಗಿಸಿದರು. ಸುತ್ತ ಇರುವೆ ಬರದ ಹಾಗೆ ಔಷಧಿ ಹಾಕಿದರು. ಮಗಳು ಬರುವ ಹೊತ್ತಿಗೆ ಅವಳ ದೇಹಾನ ಚಿವುಟಿ ಚಿವುಟಿ ಮಾಯಾವಾಗಿಸಿಬಿಡುವರೆಂದು ಸೂರ್ಯಾರಾವು ಗಾಬರಿಯಾದ. ಇದ್ದಕ್ಕಿದ್ದ ಹಾಗೆ, 'ಹೆಣಾನ ಮಲಗುವ ಕೋಣೆಗೆ ಸಾಗಿಸಿ' ಅಂದ.

'ಅದಕ್ಕೆ ಶಾಸ್ತ್ರ ಒಪ್ಪಲ್ಲ ಕಣಪ್ಪಾ. ಯಾವ ಘಳಿಗೆಯೋ, ಯಾವ ನಕ್ಷತ್ರವೋ'

'ಪರವಾಗಿಲ್ಲ ಅಜ್ಜಿ! ಈ ಮನೆ ಅವಳೇ ಕಟ್ಟಿಸಿದ್ದು. ಈ ಮನೆಯ ಪ್ರತಿ ಇಂಚಿನಲ್ಲೂಅವಳ ಬೆವರ ಶ್ರಮ ಇದೆ. ಈ ಮನೆಯಲ್ಲಿ ಅವಳ ದೇಹ ಎಲ್ಲಿ ಬೇಕಾದರೂ ಇಡಬಹುದು' ಅಂದು ಅನೂರಾಧಾಳ ದೇಹ ಜೋಪಾನ ಮಾಡಿದ.

ಇಪ್ಪತ್ತೆಂಟು ವರ್ಷದ ಸಾಂಗತ್ಯ. ನನಗೆ ಏನೆಲ್ಲಾ ಕೊಟ್ಟಳು! ಸ್ನೇಹ – ಪ್ರೀತಿ – ಸಂಪತ್ತು ಸೇವೆ ಕೊನೆಗೆ ಈಗ ಜೀವ.

ಮನೆ ತುಂಬಾ ಜನವೋ ಜನ. ಮನೆಯಲ್ಲಿ ಹೀಗೆ ಇಷ್ಟೊಂದು ಜನ ಇರುವುದು ಅನೂರಾಧಾಗೆ ಹಿಡಿಸುವುದಿಲ್ಲ. ಅವಳು ಆರಿಸಿ ಹಾಕಿಸಿದ ಮಾರ್ಬಲ್ ಕೊಳೆಯಾದರೆ ಉಜ್ಜಿ ತೊಳೆದು ಹೊಳೆಯುವ ಹಾಗೆ ಮಾಡುತ್ತಿದ್ದಳು. ಸಿಂಕು, ಬಾತ್ ರೂಮ್ ಮಿಂಚುವ ಹಾಗೆ ಇಟ್ಟಿದ್ದಳು. ಬಂದವರು ಅವಳ ಹೊಳೆಯುವ ಸ್ಟೀಲು ಒಲೆಯ ಮೇಲೆ ಹಾಲು ಉಕ್ಕಿಸಿ ಗಲೀಜು ಮಾಡುತ್ತಿದ್ದಾರೆ. ಸೋಫಾ ಹತ್ತಿ ತುಳಿಯುತ್ತಿದ್ದಾರೆ. ಅನೂರಾಧ ಇದ್ದಿದ್ದರೆ ಎಷ್ಟು ನೊಂದುಕೊಳ್ಳುತ್ತಿದ್ದಳೋ ಏನೋ! ಸೂರ್ಯಾರಾವನಿಗೆ ಏನೂ ಗೊತ್ತಿಲ್ಲ. ಇದೆಲ್ಲಾ ಅವನ ಕೈಲಾಗಲ್ಲ. ಹೌಸ್ ಕೀಪಿಂಗ್ ನಿಂದ ಹಿಡಿದು ಮನೀ ಮ್ಯಾನೇಜ್‌ಮೆಂಟಿನವರೆಗೂ ಎಲ್ಲಾ ಆಕೆಯದೇ ಮೇಲುಸ್ತುವಾರಿ. ಷೇರು ಕೊಳ್ಳುವುದು, ಮಾರುವುದು ಚಿನ್ನ ಖರೀದಿಸಿ ಅಡ ಇಟ್ಟು, ಸಾಲ ತಂದು ಚಿನ್ನ ಖರೀದಿ ಮಾಡುವುದು, ಒಂದಾ ಎರಡಾ.. ಸೂರ್ಯಾರಾವ್ ಕುಟುಂಬದ ಈ ದಿನದ ಪುರೋಗತಿಗೆ ಕಾರಣ ಅವಳೇ ಅಲ್ಲವೇ!

'ಐ ಯಾಮ್ ಸಾರಿ ಪಾಪಾ' ಮಗಳು ಬಂದೇ